ಸಾಹಿತ್ಯ ಉತ್ಸವಗಳ ಸುತ್ತ...

# ಸಾಹಿತ್ಯ ಸಂಬಂಧವೇ ಇಲ್ಲದ ಸಮ್ಮೇಳನಗಳು

**ಡಿ.ವಿ. ಪ್ರಹ್ಲಾದ್**

ಪ್ರತಿ ಸಮ್ಮೇಳನ ಆರಂಭಗೊಂಡಾಗಲೂ ಈಗಲೂ ಸಾಹಿತ್ಯ ಸಮ್ಮೇಳನಗಳು ಪ್ರಸ್ತುತವೇ ಅನ್ನುವ ಪ್ರಶ್ನೆಯನ್ನು ಮತ್ತೆ ಮತ್ತೆ ಕೇಳಿಕೊಳ್ಳಲಾಗುತ್ತಿದೆ. ಹಾಗೆ ನೋಡಿದರೆ ಸಾಹಿತ್ಯ ರಚನೆ ಸಂವಹನದ ರೀತಿಗೂ ಸಮ್ಮೇಳನಗಳ ಆರ್ಭಟಕ್ಕೂ ಸಂಬಂಧವೇ ಕಾಣುವುದಿಲ್ಲ. ಪರಿಷತ್ತಿನ ಸಮ್ಮೇಳನಗಳಿಗೆ ಸರಿಸುಮಾರು ಒಂದು ನೂರು ವರ್ಷಗಳ ಇತಿಹಾಸ ಇದೆ. ಕನ್ನಡದ ಬಗೆಗಿನ ಜಾಗೃತಿ, ಸಾಹಿತ್ಯದ ಬಗೆಗಿನ ತಿಳಿವಳಿಕೆ, ಭಾಷೆಯ ಏಕರೂಪತೆ ಇತ್ಯಾದಿ ಕಾರಣಗಳು ಆಗಿನದ್ದಾದರೂ ಈಗಲೂ ಈ ಸಂಪರ್ಕ ಯುಗದಲ್ಲೂ ಅವೇ ಕಾರಣಗಳು ಎದುರಿಗಿವೆ.

ಬರೆಯುವವರು ತಮ್ಮತಮ್ಮ ಪ್ರೇರಣೆ, ಸಂವೇದನೆಗಳಿಗೆ, ವೈಚಾರಿಕ ನಿಲುವುಗಳಿಗೆ, ತಿಳಿವಳಿಕೆಗೆ ಅನುಗುಣವಾಗಿ ಬರೆಯುತ್ತಾರೆ. ಇನ್ನು, ಬರೆದದ್ದನ್ನು ತಲುಪಿಸಲು ಪಾಂಪ್ಲೆಟ್ಟಿನಿಂದ ಫೇಸ್‌ಬುಕ್ಕಿನವರೆಗೆ ಬಹುವಿಧದ, ಬಹುರೂಪದ ಮಾಧ್ಯಮಗಳು ಇವೆ. ಪತ್ರಿಕೆ, ಪುಸ್ತಕ, ಇತ್ಯಾದಿಗಳ ಮೂಲಕ ಇವು ತಲುಪುತ್ತಿವೆ. ಓದುವವರು ತಮಗೆ ಬೇಕಾದ್ದು ಓದುವ, ಮೆಚ್ಚುವ ಆಯ್ಕೆಗಳು ಇದ್ದೇ ಇವೆ.

ಸಮ್ಮೇಳನಗಳಿಂದ ಸಾಹಿತ್ಯವನ್ನು ಒದ್ದೋಡಿಸಿ ಯಾವುದೋ ಕಾಲವಾಗಿದೆ. ಸಮ್ಮೇಳನಕ್ಕೆ ಹರಿದುಬರುತ್ತಿರುವ ಹಣ ಮತ್ತು ಮಾಧ್ಯಮಗಳ ಮೂಲಕ ದೊರಕುವ ಪ್ರಚಾರ ಸಾಹಿತ್ಯದ ಹೆಸರು ಹೇಳಿಕೊಂಡು ತಮ್ಮನ್ನು ತಾವು ಮೆರೆಸಿಕೊಳ್ಳುವ ಪ್ರಥಮ ಪುರುಷರ ನಾಟಕ ಮಂಡಳಿಗಳಾಗಿವೆ. ಟಿ.ವಿ. ವೆಂಕಟಾಚಲ ಶಾಸ್ತ್ರಿ, ಚಿದಾನಂದಮೂರ್ತಿ, ಯಶವಂತ ಚಿತ್ತಾಲ, ವ್ಯಾಸರಾಯ ಬಲ್ಲಾಳ ಮುಂತಾದ ವಿದ್ವಾಂಸ, ಲೇಖಕರಿಗೆ ಜಾತಿ ಪರಿಗಣಿಸದೆ ದೊರಕಬೇಕಿದ್ದ ಮನ್ನಣೆ ನ್ಯಾಯವಾಗಿ ದೊರೆಯಬೇಕಿತ್ತು. ಸಾಮಾಜಿಕ ನ್ಯಾಯ, ಪ್ರಾದೇಶಿಕತೆಯ ಹೆಸರಿನಲ್ಲಿ ನಡೆದಿದ್ದು ಜಾತೀಯತೆ, ಶುದ್ಧ ಗುಂಪುಗಾರಿಕೆ.

ಈ ಸಾಹಿತಿ ಸಮುದಾಯ ತನ್ನ ಸ್ವಾರ್ಥಕ್ಕಾಗಿ ಪರಿಷತ್ತನ್ನು 'ಕಡು ಜಾಣರಿಗೆ' ಬೆಳ್ಳಿ ತಟ್ಟೆಯಲ್ಲಿಟ್ಟು ಒಪ್ಪಿಸಿ ಯಾವುದೋ ಕಾಲವಾಗಿದೆ. ಅದಕ್ಕೇ ಅಲ್ಲಿನ ಪಾಳೇಗಾರಿಕೆಯಲ್ಲಿ ಜೊಳ್ಳು, ಗಟ್ಟಿ ಕಾಳು ಯಾವುದೂ ಕಾಣುವುದಿಲ್ಲ. ಸಮ್ಮೇಳನಗಳಿಗೆ ರಾಜಕಾರಣದ ರೋಗ ಈಗ ಗೆದ್ದಲ ಹಾಗೆ ಹಬ್ಬಿದೆ. ಪರಿಷತ್ತಿಗೆ ಹತ್ತಿದ ಜಾತೀಯತೆಯ ರೋಗ ಈಗ ಉಲ್ಬಣಗೊಂಡಿದೆ. ಸಾಹಿತಿಗಳ ಸಮುದಾಯಕ್ಕೆ ತಮ್ಮ ಮನ್ನಣೆಯು ಸ್ವಾರ್ಥ ಬಿಟ್ಟರೆ ಬೇರೇನೂ ಬೇಕಿಲ್ಲ.